ಉತ್ಪತ್ತಿ ಆಗಬೇಕಾಗಿದ್ದು ಅದರಲ್ಲಿ ಶೇ. 10ರಷ್ಟು ಅಂದರೆ 10 ಲಕ್ಷ ಕಾಯಿಗಳು ನಷ್ಟವಾಗಿರುವ ಸಾಧ್ಯತೆ ಇದೆ.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮೂರು ಕಿರು ಪ್ರಯೋಗಾಲಯಗಳನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಪರೋಪಜೀವಿಗಳನ್ನು ಉತ್ಪಾದಿಸಲು ತೆಗೆದಿರುತ್ತದೆ.

ನಿಗಧಿಪಡಿಸಿದ 2.25 ಲಕ್ಷ ಪರೋಪಜೀವಿಗಳನ್ನು ಉತ್ಪಾದನೆ ಮಾಡಲು ಗುರಿ ಇದ್ದು ಈವರೆವಿಗೂ 5.79ಲಕ್ಷ ಪರೋಪಜೀವಿಗಳನ್ನು ಜೂನ್ 91ರ ಮಾಹೆಯವರೆಗೂ ಉತ್ಪಾದನೆ ಮಾಡಿ ಭಾದೆಗಳೊಳಗಾದ ರೈತರ ತೋಟಗಳಲ್ಲಿ ಬಿಡುಗಡೆ ಮಾಡಿ ಇದರ ಭಾದೆಯನ್ನು ಸಮಗ್ರ ರೀತಿಯಲ್ಲಿ ತಡೆಗಟ್ಟಲಾಗಿದೆ. ಇದಲ್ಲದೆ ತೆಂಗು ಅಭಿವೃದ್ಧಿ ಮಂಡಳಿ ಸಹಯೋಗದಿಂದ ಉಡುಪಿಯಲ್ಲಿ ಬೃಹತ್ ಪ್ರಮಾಣಾದ ಒಂದು ಪ್ರಯೋಗಾಲಯ ನಿರ್ಮಾಣ ಮುಗಿಯುವ ಹಂತದಲ್ಲಿದ್ದು ಇದರಿಂದ 10ಲಕ್ಷ ಪರೋಪಜೀವಿಗಳನ್ನು ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡಿದೆ. 1991-92ನೇ ಸಾಲಿನಲ್ಲಿ ರಾಜ್ಯದ 10 ಪ್ರಮುಖ ಜಿಲ್ಲೆಗಳಲ್ಲಿ ಹುಳುವಿನ ಸಮಗ್ರ ಹತೋಟಿಗಾಗಿ 30 ಲಕ್ಷ ರೂ.ಗಳ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಸಗೊಬ್ಬರಗಳ ಬೆಲೆ ಏರಿಕೆ

2240 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ಅತ್ಯವಶ್ಯಕವಾಗಿ ಬೇಕಾಗುವ ರಾಸಾಯನಿಕ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಯ ಬಗ್ಗೆ ಬಂದ ಪ್ರತಿಭಟನೆಗಳನ್ನು ಸರ್ಕಾರ ಅರಿತಿದೆಯೇ?

ಆ) ಕೇಂದ್ರ ಸರ್ಕಾರ ರಸಗೊಬ್ಬರಗಳ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿರುವುದರಿಂದ ಈ ದರ ಹೆಚ್ಚಾಗಿಲ್ಲವೆ?

ಇ) ಸಬ್ಸಿಡಿ ನೀಡುವುದನ್ನು ಮುಂದುವರೆಸುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದಿದೆಯೇ?

ಈ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ನಿರ್ಧಾರವೇನೆಂಬುದನ್ನು ರಾಜ್ಯ ಸರ್ಕಾರ ಮನಗಂಡಿದೆಯೇ?

ಉ) ರಸಗೊಬ್ಬರಗಳ ಬೆಲೆಯನ್ನು ಇಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಹೌದು

ಆ) ಹೌದು

ಇ) ಹೌದು, ರಸಗೊಬ್ಬರಗಳ ಬೆಲೆಯನ್ನು ಇಳಿಸುವುದು ಮತ್ತು ದ್ವಂದ್ವ ಬೆಲೆ ನೀತಿಯನ್ನು ಕೈಬಿಡುವಂತೆ ಕೇಂದ್ರವನ್ನು ಕೋರಲಾಗಿದೆ.

ಈ) ಇನ್ನೂ ಇಲ್ಲ

ಈ) ರಸಗೊಬ್ಬರಗಳ ಬೆಲೆಯನ್ನು ನಿಗದಿಪಡಿಸುವ ಅಧಿಕಾರ ಕೇಂದ್ರ ಸರ್ಕಾರದ ಕಾರ್ಯವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಈ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಲಾಗಿದೆ.

ರಾಜ್ಯದಲ್ಲಿ ಬಿತ್ತನೆ ಬೀಜಗಳ ಕೊರತೆ

2226 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿತ್ತನೆ ಬೀಜಗಳ ಕೊರತೆ ಇದೆಯೇ?